ದಿಃ 26-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ. ಹೆಚ್.ಎಲ್.ವಿ ವಾದಿ ಪರ ವಕೀಲರಿಂದಃ

ನನಗೆ ಕನ್ನಡ ಭಾಷೆಯಲ್ಲಿ ಸಂಪೂರ್ಣವಾಗಿ ಮಾತನಾಡಲು ಬರುವುದಿಲ್ಲ. ನಾನು ಈ ದಾವೆಯಲ್ಲಿ ಮ್ಯೂಟೇಶನ್ ದಾಖಲೆಯನ್ನು ಹಾಜರುಪಡಿಸಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. 2024-25 ರ ನಿಡಿ-4 ರ ಗಣಕೀಕೃತ ಪಹಣಿಯನ್ನು ಹಾಜರುಪಡಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವನಂ ನಾಗಪ್ಪ ರವರ ತಂದೆಯ ಹೆಸರು ಬೈಯ್ಯಣ್ಣ ಎಂದರೆ ಗೊತ್ತಿಲ್ಲ. ವನಂ ನಾಗಪ್ಪ ರವರ ತಂದೆಯ ಹೆಸರು ಬೈಯ್ಯಣ್ಣ ಎಂದು ನನಗೆ ಸ್ಪಷ್ಟವಾಗಿ ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಂದಾಯ ದಾಖಲೆಗಳಲ್ಲಿ ವನಂ ನಾಗಪ್ಪ ರವರ ತಂದೆಯ ಹೆಸರು ತಪ್ಪಾಗಿ ಭೂಮಣ್ಣ ಎಂದು ನಮೂದು ಆಗಿದೆ ಎಂದರೆ ಸಾಕ್ಷಿ ವನಂ ನಾಗಪ್ಪ ಬಿನ್ ಭೂಮಣ್ಣ ಹಾಗೂ ನಾಗಪ್ಪ ಬಿನ್ ಬೈಯ್ಯಣ್ಣ ರವರು ಪ್ರತ್ಯೇಕ ವ್ಯಕ್ತಿಗಳು ಎಂದು ನುಡಿಯುತ್ತಾರೆ.

ನಿಡಿ-2 ರ ಕ್ರಯ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಿಡಿ-2 ರ ಕ್ರಯ ಪತ್ರಕ್ಕೆ ಸಾಕ್ಷಿಗಳಾಗಿ ಯಾರು ಸಹಿ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಿಡಿ-2 ರ ಕ್ರಯ ಪತ್ರದ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಡಿ-2 ರ ಅಂಶಗಳನ್ನು ನನಗೆ ಯಾರೂ ಸಹ ಓದಿ ತಿಳಿಸಿರುವುದಿಲ್ಲ. ವನಂ ನಾಗಪ್ಪ ರವರ ತಂದೆಯ ಹೆಸರು ಭೂಮಣ್ಣ ಎಂದು ಅವರ ಆಧಾರ್ ಕಾರ್ಡ್ ಹಾಗೂ ಇತರೆ ಗುರುತಿನ ಚೀಟಿಗಳಲ್ಲಿ ಯಾವ ಇಸವಿಯಿಂದ ನಮೂದು ಆಗಿದೆ ಎಂಬುದು ನನಗೆ ಗೊತ್ತಿಲ್ಲ. ನಿಡಿ-2 ಅನ್ನು ಬರೆದುಕೊಟ್ಟರು ಎಂದು ಹೇಳುವ ವ್ಯಕ್ತಿಯ ಅಸಲಿ ಹೆಸರು ನಾಗಪ್ಪ ಎಂದರೆ ಸಾಕ್ಷಿ ಮೌನವಾಗಿ ಇರುತ್ತಾರೆ. ನಿಡಿ-2 ಅನ್ನು ಬರೆದುಕೊಟ್ಟರು ಎಂದು ಹೇಳುವ ನಾಗಪ್ಪನ ತಂದೆಯ ಹೆಸರು ಭೂಮಣ್ಣನೂ ಅಲ್ಲ ಬೈಯ್ಯಣ್ಣನೂ ಅಲ್ಲ ಎಂದರೆ ಸಾಕ್ಷಿ ಮೌನವಾಗಿ ಇರುತ್ತಾರೆ.

ದಾವಾ ಆಸ್ತಿಯು ವಾದಿಗೆ ಮಾರಾಟ ಮಾಡಿದ ವನಂ ನಾಗಪ್ಪ ಬಿನ್ ಬೈಯ್ಯಣ್ಣ ರವರು ತೀರಿಕೊಂಡು 40 ವರ್ಷಗಳು ಕಳೆದಿವೆ ಎಂದರೆ ಗೊತ್ತಿಲ್ಲ. ಸದರಿ ವನಂ ನಾಗಪ್ಪ ಬಿನ್ ಬೈಯ್ಯಣ್ಣ ರವರು ಎಷ್ಟು ವರ್ಷಗಳ ಹಿಂದೆ ತೀರಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಈ ದಾವೆಯ 6 ನೇ ಪ್ರತಿವಾದಿಯು ಏನೆಂದು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆ ಎಂಬ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. ಇಂದಿಗೂ ದಾವಾ ಆಸ್ತಿಯ ಸ್ವಾದೀನದಲ್ಲಿ ವಾದಿ ಮತ್ತು ಅವರ ಕುಟುಂಬದವರೇ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯನ್ನು ನಾವು ಖರೀದಿಸಿದ ನಂತರದಿಂದ ನಾವೇ ಅದರ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯನ್ನು ನಾವು ಖರೀದಿಸಿದೆವು ಎಂದು ಹೇಳುವ ದಿನಾಂಕ ನನಗೆ ನೆನಪಿಲ್ಲ. ದಾವಾ ಆಸ್ತಿಯನ್ನು ಖರೀದಿಸಿ ಸುಮಾರು 5-6 ವರ್ಷಗಳು ಕಳೆದಿವೆ. ವಾದಿಯು 1 ರಿಂದ 5 ನೇ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಹೂಡಿ ಎಷ್ಟು ವರ್ಷಗಳು ಕಳೆದಿವೆ ಎಂಬುದು ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯನ್ನು 2014 ರಲ್ಲಿ ಹೂಡಿದ್ದು 2021 ರಲ್ಲಿಯೂ ಈ ದಾವೆಯು ಚಾಲ್ತಿಯಲ್ಲಿತ್ತು ಎಂದರೆ ಗೊತ್ತಿಲ್ಲ. ಈ ದಾವೆಯು ಚಾಲ್ತಿಯಲ್ಲಿದ್ದ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿರಲಿಲ್ಲವೆಂದು ಸುಳ್ಳು ಸಾಕ್ಷ್ಮಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯಾದ 6 ನೇ ಪ್ರತಿವಾದಿಯು ನನಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟ ನಂತರ ಈ ದಾವೆಯು ಚಾಲ್ತಿಯಲ್ಲಿರುವ ವಿಚಾರ ನನಗೆ ತಿಳಿಯಿತು.

ನನ್ನ ಗಂಡನ ಹೆಸರು ಎನ್. ನರಸಿಂಹರೆಡ್ಡಿ ಎಂದರೆ ಸರಿ. ನನ್ನ ಗಂಡನ ತಂದೆ ಎಂದರೆ ನನ್ನ ಮಾವನ ಹೆಸರು ಜಿ. ನರಸಿಂಹರೆಡ್ಡಿ ಎಂದರೆ ಸರಿ. ಈ ದಾವೆಯ 4 ನೇ ಪ್ರತಿವಾದಿಯು ನನ್ನ ಗಂಡ ಎಂದರೆ ಸರಿ. ನನ್ನ ಗಂಡ ಈ ದಾವೆಯಲ್ಲಿ 4 ನೇ ಪ್ರತಿವಾದಿಯಾದ ಕಾರಣ ಈ ದಾವೆಯು ಚಾಲ್ತಿಯಲ್ಲಿರುವ ವಿಚಾರ ನನಗೆ ಮತ್ತು ನನ್ನ ತಾಯಿಗೆ ಮೊದಲೇ ತಿಳಿದಿತ್ತು ಎಂದರೆ ಸರಿಯಲ್ಲ. ನಿಡಿ-2 ಕ್ರಯ ಪತ್ರವನ್ನು ನನ್ನ ತಾಯಿ ಭೂಮಿ ನಾಗಪ್ಪ ರವರೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2021 ನೇ ಇಸವಿಯಲ್ಲಿ ಚೀಲಂನಹಳ್ಳಿಯಲ್ಲಿ ವನಂ ನಾಗಪ್ಪ ಎಂಬ ಹೆಸರಿನ ಯಾವುದೇ ವ್ಯಕ್ತಿ ಅಸ್ತಿತ್ವದಲ್ಲಿರಲಿಲ್ಲ ಮತ್ತು ಭೂಮಿ ನಾಗಪ್ಪ ಎಂಬುವವರು ಮಾತ್ರ ಇದ್ದರು ಎಂದರೆ ಸರಿಯಲ್ಲ. ನಿಡಿ-2 ಅನ್ನು ಬರೆದುಕೊಟ್ಟ ವ್ಯಕ್ತಿಯ ಆಧಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿಯ ಪ್ರಕಾರ ಆತನ ನಿಜವಾದ ಹೆಸರು ಭೂಮಿನಾಗಪ್ಪ ಎಂದರೆ ಗೊತ್ತಿಲ್ಲ. ನಿಡಿ-2 ರ 1 ನೇ ಪುಟದ ಹಿಂಬದಿಯಲ್ಲಿರುವ ಭಾವಚಿತ್ರಗಳ ಪೈಕಿ 2 ನೇ ವ್ಯಕ್ತಿಗೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ನಾನು ಪರಿಶೀಲಿಸಿರುವುದಿಲ್ಲ. ದಾವಾ ಆಸ್ತಿಯನ್ನು ವಾದಿಗೆ ಬರೆದುಕೊಟ್ಟ ವನಂ ನಾಗಪ್ಪ ರವರಿಗೆ ತಿಪ್ಪಣ್ಣ ಎಂಬ ಹೆಸರಿನ ಒಬ್ಬನೇ ತಮ್ಮನಿದ್ದನು ಎಂದರೆ ಗೊತ್ತಿಲ್ಲ. ನಿಡಿ-2 ರ 1 ನೇ ಪುಟದ ಹಿಂಬದಿಯಲ್ಲಿರುವ ಭಾವಚಿತ್ರಗಳ ಪೈಕಿ 2 ನೇ ವ್ಯಕ್ತಿಗೆ ಸಂಬಂಧಪಟ್ಟ ಅಧಾರ್ ಕಾರ್ಡ್ ಅಥವಾ ಚುನಾವಣಾ ಗುರುತಿನ ಚೀಟಿಯನ್ನು ನಾನು ಪರಿಶೀಲಿಸಿರುವುದಿಲ್ಲ. 2021 ರಲ್ಲಿ ಸದರಿ ವ್ಯಕ್ತಿಯು ತನ್ನ ಹೆಸರನ್ನು ಭೂಮಿನಾಗಪ್ಪ ರಿಂದ ವನಂ ನಾಗಪ್ಪ ಎಂದು ಆಧಾರ್ ಕಾರ್ಡ್ ನಲ್ಲಿ ತಿದ್ದುಪಡಿ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ನಿಡಿ-2 ರ ದಿನಾಂಕದಿಂದ ನಾವು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹ ಇದ್ದೇವೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಮಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರ ಕ್ರಯ ಪತ್ರವು ಸೃಷ್ಟಿ ಮಾಡಿಕೊಂಡಿರುವ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ದಾವಾ ಆಸ್ತಿಯನ್ನು ಮೋಸದಿಂದ ಕಬಳಿಸಬೇಕೆಂದು ನಾನು ಇತರೆ ಪ್ರತಿವಾದಿಗಳೊಂದಿಗೆ ಸೇರಿ

ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯನ್ನು 1958 ರಲ್ಲಿ ಖರೀದಿಸಿದ ನಂತರದಿಂದ ಇಲ್ಲಿಯವರೆಗೂ ತಾನೇ ಸ್ವಾಧೀನದಲ್ಲಿರುತ್ತಾರೆ ಆದರೆ ಅದರ ಕಂದಾಯ ದಾಖಲೆಗಳು ವಾದಿಗೆ ಮಾರಾಟ ಮಾಡಿದ ವ್ಯಕ್ತಿಯ ಹೆಸರಿನಲ್ಲಿ ಮುಂದುವರೆದಿದೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ಯಾರು ಹೇಳಿ ಬರೆಸಿದರು ಎಂಬುದು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

P.M Sachin Digitally signed by P.M Sachin Date: 2025.03.29 11:00:41 +0530

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು